ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಗುಬ್ಬಿ.

ಉಪಸ್ಥಿತರು : ಶ್ರೀಮತಿ. ಸವಿತರಾಣಿ ಹೆಚ್.ವಿ., ಬಿ.ಎ. ಎಲ್., ಎಲ್ಎಲ್.ಬಿ.,
ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.
ಗುಬ್ಬಿ

ಅಸಲು ದಾವಾ ಸಂಖ್ಯೆಃ 348/2025

ದಿನಾಂಕಃ 16 ನೇ ಜುಲೈ 2026

ವಾದಿ/ಯರುಃ **ಕೆನರಾ ಬ್ಯಾಂಕ್,**
ಗುಬ್ಬಿ ಶಾಖೆ,
ಪ್ರತಿನಿಧಿಸುವವರುಃ ವ್ಯವಸ್ಥಾಪಕರು,
ಶ್ರೀ ಸೌರಭ್ ಪಾಂಡೆ ಬಿನ್ ಅಶೋಕ್ ಪಾಂಡೆ, ಸುಮಾರು 38 ವರ್ಷ, ಶಾಖಾ ವ್ಯವಸ್ಥಾಪಕರು, ಕೆನರಾ ಬ್ಯಾಂಕ್, ಗುಬ್ಬಿ ವಾಸ : ತುಮಕೂರು.

(ಪ್ರತಿನಿಧಿಸುವವರುಃ ಶ್ರೀ.ಹೆಚ್.ಎನ್.ಡಿ.,ನ್ಯಾಯವಾದಿಗಳು)

-ವಿರುದ್ದ-

ಪ್ರತಿವಾದಿ/ಯರುಃ 1. ಶ್ರೀ ಅರುಣ್ ಕುಮಾರ್ ಬಿನ್ ಪಾತಯ್ಯ,
ವಯಸ್ಸು ಸುಮಾರು 30 ವರ್ಷ,

2. ಶ್ರೀ ಜಯಪ್ರಕಾಶ್ ಬಿ.ಎಂ. ಬಿನ್ ಮೂಡ್ಲಗಿರಿಯಪ್ಪ,
ವಯಸ್ಸು ಸುಮಾರು 30 ವರ್ಷ,

3. ಶ್ರೀ ನಾಗರಾಜು ಬಿ.ಸಿ. ಬಿನ್ ಚಿಕ್ಕನರಸಯ್ಯ,
ವಯಸ್ಸು ಸುಮಾರು 41 ವರ್ಷ,

4. ಶ್ರೀ ತಿಮ್ಮಯ್ಯ ಬಿನ್ ಅವಸರಂಗಯ್ಯ,
ವಯಸ್ಸು ಸುಮಾರು 54 ವರ್ಷ,

5. ಶ್ರೀ ಗಿರೀಶ್ ಬಿನ್ ಮೂಡ್ಲಗಿರಿಯಪ್ಪ,
ವಯಸ್ಸು ಸುಮಾರು 38 ವರ್ಷ,

ಪ್ರತಿವಾದಿಗಳೆಲ್ಲರ ವಾಸ : ಬಿಕ್ಕೇಗುಡ್ಡ ಕಾವಲ್,
ಕಸಬ ಹೋಬಳಿ, ಗುಬ್ಬಿ ತಾಲ್ಲೂಕು.

(ಏಕತರ್ಫಿಯರಾಗಿರುತ್ತಾರೆ)

1.	ದಾವಾ ದಾಖಲಿಸಿದ ದಿನಾಂಕ	27.06.2025		
2.	ದಾವಾ ಸ್ವರೂಪ	ಹಣದ ವಸೂಲಾತಿಗಾಗಿ		
3.	ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ	10.06.2026		
4.	ತೀರ್ಪನ್ನು ಉದ್ಘೋಷಿಸಿದ ದಿನಾಂಕ	16.07.2026		
5.	ತೆಗೆದುಕೊಂಡ ಅವಧಿ	ವರ್ಷ	ತಿಂಗಳು	ದಿನಗಳು
		01	00	20

SAVITHARANI H V

Digitally signed by SAVITHARANI H V
Date: 2026.07.17 14:41:43 +0530

(ಶ್ರೀಮತಿ ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಗುಬ್ಬಿ.

:: **ತೀರ್ಪು** ::

ಸದರಿ ವಾದಿ ಬ್ಯಾಂಕ್ ಈ ದಾವೆಯನ್ನು ಪ್ರತಿವಾದಿಯರ ವಿರುದ್ದ ಸಾಲದ ವಸೂಲಾತಿಗೆ ಸಲ್ಲಿಸಿದ್ದು, ದಾವೆ ಸಲ್ಲಿಸಿದ ದಿನಾಂಕದಿಂದ ಬಾಕಿ ಒಟ್ಟು ರೂ.1,04,399/- ಸಾಲದ ಹಣವನ್ನು ಕೊಡಿಸಬೇಕೆಂದು ಹಾಗೂ ಪ್ರಸ್ತುತ ಮತ್ತು ಭವಿಷ್ಯದ ಬಡ್ಡಿ ದರ ಶೇ.11.65% ಗಳನ್ನು ದಾವಾ ದಿನಾಂಕದಿಂದ ಮೊತ್ತವನ್ನು ವಸೂಲಿ ಮಾಡುವವರೆಗೆ ಪ್ರತಿವಾದಿಯರು ಪಾವತಿಸಲು ಬಾದ್ಯಸ್ಥರಾಗಿರುತ್ತಾರೆಂದು ಆದೇಶಿಸಬೇಕೆಂದು ಕೋರಿ ಸಲ್ಲಿಸಿರುತ್ತಾರೆ.

2. **ಈ ದಾವೆಯ ಸಂಕ್ಷಿಪ್ತ ವಿವರಣೆ ಈ ಕೆಳಗಿನಂತೆ ಇರುತ್ತದೆಃ-**

ವಾದಿ ಬ್ಯಾಂಕ್ ಬ್ಯಾಂಕಿಂಗ್ ಕಂಪನಿಗಳ ಕಾಯ್ದೆ (ಅಂಡರ್ ಟೇಕಿಂಗ್ ಗಳ ಸ್ವಾಧೀನ ಮತ್ತು ವರ್ಗಾವಣೆ) ಕಾಯಿದೆ 1970 ರ ಅಡಿಯಲ್ಲಿ ನೋಂದಾಯಿತವಾಗಿರುತ್ತದೆ ಹಾಗೂ ಇದರ ಕೇಂದ್ರ ಕಛೇರಿ ಬೆಂಗಳೂರಿನಲ್ಲಿದ್ದು ಅದರ ಒಂದು ಶಾಖೆಯು ಗುಬ್ಬಿಯಲ್ಲಿರುತ್ತದೆ.

1 ರಿಂದ 5ನೇ ಪ್ರತಿವಾದಿಯರು ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ, ಬಿಕ್ಕೆಗುಡ್ಡ ಕಾವಲ್ ನಲ್ಲಿರುವ ಕಾವೇರಿ ರೈತ ಸಂಘದ (JLG) ಜಂಟಿ ಸದಸ್ಯರಾಗಿದ್ದು, 1 ಮತ್ತು 2 ನೇ ಪ್ರತಿವಾದಿಯರು ಸದರಿ ಸಂಘದ

ಪ್ರತಿನಿಧಿಗಳಾಗಿರುತ್ತಾರೆ. ಕೃಷಿ ಚಟುವಟಿಕೆಗಳನ್ನು ಮಾಡಲು ಮತ್ತು ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳಿಂದ ಆರ್ಥಿಕ ನೆರವು ಪಡೆಯಲು ಮತ್ತು ಇತರ ಕಾರಣಗಳಿಗಾಗಿ ಈ ಜಂಟಿ ಹೊಣೆಗಾರಿಕೆ ಗುಂಪನ್ನು ರಚಿಸಿಲಾಗಿದೆ. ಸದರಿ ಸಂಘದ ಸದಸ್ಯರಾದ 1ನೇ ಪ್ರತಿವಾದಿಯು ಬೆಳೆ ಸಾಲ ನೀಡಬೇಕೆಂದು ವಾದಿ ಬ್ಯಾಂಕಿಗೆ ಕೋರಿರುತ್ತಾರೆ. ಅದರಂತೆ 1ನೇ ಪ್ರತಿವಾದಿಗೆ ದಿನಾಂಕ:23.02.2018 ರೂ.70,000/- ಸಾಲವನ್ನು ವಾದಿ ಬ್ಯಾಂಕಿನಿಂದ ಖಾತೆ ಸಂಖ್ಯೆಃ 20148010048475 ಮುಖಾಂತರ ಪಡೆದು ಅದೇ ದಿವಸ 1ನೇ ಪ್ರತಿವಾದಿಯು ಸಾಲದ ಒಪ್ಪಂದದ ಕರಾರುಪತ್ರವನ್ನು ಮತ್ತು ಇತರೆ ದಾಖಲಾತಿಗಳನ್ನು ವಾದಿ ಪರ ಬ್ಯಾಂಕಿಗೆ ಬರೆದುಕೊಟ್ಟು ಸದರಿ ಸಾಲವನ್ನು ಶೇ.11.65% ರಂತೆ ಬಡ್ಡಿಯೊಂದಿಗೆ ಮರುಪಾವತಿಸುತ್ತೇವೆಂದು ಒಪ್ಪಿ ದಿನಾಂಕ:17.02.2018 ರಂದು ಕರಾರು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಸದರಿ ಸಾಲವನ್ನು 3 ವರ್ಷದ ಮಿತಿಯಲ್ಲಿ 12 ಮಾಸಿಕ ಕಂತುಗಳಲ್ಲಿ ಪಾವತಿಸಲು ಒಪ್ಪಿದ್ದು ಮತ್ತು ಬಡ್ಡಿಯ ದರವು ಸಾಧಾರಣ ಮತ್ತು ತದನಂತರ ಬಡ್ಡಿಯ ದರವು ಸಂಕೀರ್ಣವಾಗಿರುತ್ತದೆ.

3. 1ನೇ ಪ್ರತಿವಾದಿಯು ಸಿಂಡಿಕೇಟ್ ಬ್ಯಾಂಕ್ ಪರವಾಗಿ ಸದರಿ ದಿನಾಂಕದಂದು ಅಗತ್ಯವಿರುವ ಭದ್ರತಾ ದಾಖಲೆಯನ್ನು ಬರೆದುಕೊಟ್ಟಿದ್ದಾರೆ. ಅಲ್ಲದೇ ದಿನಾಂಕ 11-01-2021, 11-01-2022 ಮತ್ತು 10-01-2024 ರಂದು ಸಾಲದ ಮೊತ್ತ ಮತ್ತು ಅದಕ್ಕೆ ತಗಲುವ ಬಡ್ಡಿಯನ್ನು ಪಾವತಿಸುವ ಹೊಣೆಗಾರಿಕೆಯನ್ನು ಒಪ್ಪಿಕೊಂಡು ಅವಧಿಯನ್ನು ವಿಸ್ತರಿಸಲು ನವೀಕರಣ ಪತ್ರಗಳಿಗೆ ಸಹಿ ಹಾಕುವ ಮೂಲಕ ಒಪ್ಪಿಗೆ ನೀಡಿದ್ದಾರೆ.

ಪ್ರತಿವಾದಿಗಳು ಸಿಂಡಿಕೇಟ್ ಬ್ಯಾಂಕ್, ಬಿ.ಹೆಚ್ ರಸ್ತೆ ಶಾಖೆ, ಗುಬ್ಬಿ ರವರಿಂದ ಸಾಲ ಪಡೆದಿರುತ್ತಾರೆ. ಇತ್ತೀಚೆಗೆ ಭಾರತ ಸರ್ಕಾರವು ಬ್ಯಾಂಕಿಂಗ್ ಕಂಪನಿಗಳ ಕಾಯ್ದೆ 1970 ರ ಸೆಕ್ಷನ್ 9 ರ ಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 04-03-2020 ರ ಅಧಿಸೂಚನೆಯ ಮೂಲಕ ಸಿಂಡಿಕೇಟ್ ಬ್ಯಾಂಕ್ ಮತ್ತು ಕೆನರಾ ಬ್ಯಾಂಕ್ ಅನ್ನು ವಿಲೀನಗೊಳಿಸಿದೆ ಮತ್ತು ಬ್ಯಾಂಕಿನ ಹೆಸರನ್ನು ದಿನಾಂಕ 01-04-2020 ರಿಂದ ಜಾರಿಗೆ ಬರುವಂತೆ 'ಕೆನರಾ ಬ್ಯಾಂಕ್ ' ಎಂದು ಕರೆಯಲಾಗುತ್ತದೆ.

4. ಸದರಿ ಸಾಲವನ್ನು 3 ವರ್ಷದ ಮಿತಿಯಲ್ಲಿ ಒಟ್ಟಾರೆ 12 ಮಾಸಿಕ ಕಂತುಗಳಲ್ಲಿ ಪಾವತಿಸಬೇಕಾಗಿರುತ್ತದೆ. ಪ್ರತಿವಾದಿಯರು ಸದರಿ ಸಾಲದ

ಮೊತ್ತವನ್ನು ನಿಗಧಿತ ಅವಧಿಯೊಳಗೆ ಮರುಪಾವತಿಸಲು ವಿಫಲರಾಗಿದ್ದಾರೆ ಮತ್ತು ವಾದಿ ಬ್ಯಾಂಕಿಗೆ ಡಿಫಾಲ್ಟರ್ ಆಗಿರುತ್ತಾರೆ. ತದನಂತರ ವಾದಿ ಬ್ಯಾಂಕ್ ಸದರಿ ಸಂಘದ ಸದಸ್ಯರಿಗೆ ಮತ್ತು 1ನೇ ಪ್ರತಿವಾದಿಗೆ ಹಲವಾರು ಬಾರಿ ಸಾಲ ಮರುಪಾವತಿಸುವಂತೆ ಕೋರಿಕೊಂಡರು ಸಹ ಪ್ರತಿವಾದಿಯರು ಮೇಲೆ ಹೇಳಿದಂತೆ ಸಾಲ ಮತ್ತು ಬಡ್ಡಿಯನ್ನು ಪಾವತಿಸಿರುವುದಿಲ್ಲವಾದ್ದರಿಂದ ಈ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ಧ ರೂ.1,04,399/- ಹಣದ ಮರುಪಾವತಿಗಾಗಿ ದಾವೆಯನ್ನು ದಾಖಲಿಸಿದ್ದು, ದಾವೆಯಲ್ಲಿ ಕೋರಿರುವಂತೆ ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

5. ಪ್ರತಿವಾದಿಯರಿಗೆ ನ್ಯಾಯಾಲಯದಿಂದ ದಾವಾ ಸಮನ್ಸ್ ಜಾರಿಯಾದ ನಂತರ ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಗಳಾಗಿರುತ್ತಾರೆ.

6. ಮೇಲ್ಕಾಣಿಸಿದ ವಾದ ಪತ್ರದ ಸಂಗತಿಗಳನ್ನು ಆಧರಿಸಿ ಈ ಕೆಳಕಾಣಿಸಿದ ಅಂಶಗಳನ್ನು ರೂಪಿಸಲಾಗಿದೆ ಃ

1) ಪ್ರತಿವಾದಿಯರಿಂದ ವಾದಿ ಬ್ಯಾಂಕ್ ಪ್ರಸ್ತುತ ಮತ್ತು ಭವಿಷ್ಯದ ಬಡ್ಡಿ ದರ ಶೇ.11.65% ರಂತೆ ಬಡ್ಡಿಯೊಂದಿಗೆ ರೂ.1,04,399/- ಗಳನ್ನು

ವಸೂಲಾತಿ ಮಾಡಿಕೊಳ್ಳಲು ಅರ್ಹರಾಗಿರುತ್ತಾರೆಯೇ ?

2) ಯಾವ ಆದೇಶ ಅಥವಾ ಡಿಕ್ರಿ ?

7. ಮೇಲ್ಕಾಣಿಸಿದ ಅಂಶಗಳನ್ನು ರುಜುವಾತುಪಡಿಸುವ ಸಲುವಾಗಿ ಸದರಿ ವಾದಿ ಬ್ಯಾಂಕಿನ ಪರವಾಗಿ ಶಾಖಾ ಪ್ರಬಂಧಕರನ್ನು ಪಿ.ಡಬ್ಲ್ಯೂ -1 ಎಂದು ಸಾಕ್ಷಿ ಮಾಡಿಸಿದ್ದು, ತನ್ನ ಪರವಾಗಿ ನಿ.ಪಿ-1 ರಿಂದ 11 ರವರೆಗಿನ ದಾಖಲೆಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರ್ತಿಸಿಕೊಂಡಿರುತ್ತಾರೆ. ಪ್ರತಿವಾದಿಯರು ಸಮನ್ಸ್ ಜಾರಿಯಾದ ನಂತರ ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಗಳಾಗಿರುತ್ತಾರೆ.

8. ಸದರಿ ಪಿ.ಡಬ್ಲ್ಯೂ -1 ರವರ ಮೌಖಿಕ ಸಾಕ್ಷ್ಯ ಹಾಗೂ ನಿ.ಪಿ-1 ರಿಂದ ನಿ.ಪಿ-11 ರವರೆಗಿನ ದಾಖಲೆಗಳನ್ನು ಪರಿಶೀಲಿಸಿ, ವಾದಿ ಪರ ವಕೀಲರ ವಾದವನ್ನು ಆಲಿಸಿ, ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಃ-

ಅಂಶ-1 : ಸಕಾರಾತ್ಮಕವಾಗಿ

ಅಂಶ-2 : ಅಂತಿಮ ಆದೇಶದಂತೆ ಈ ಕೆಳಕಂಡ,

ಕಾ ರ ಣ ಗ ಳು

9. **ಅಂಶ 1 :** ವಾದಿ ಬ್ಯಾಂಕಿನ ವ್ಯವಸ್ಥಾಪಕರನ್ನು ಪಿ.ಡಬ್ಲ್ಯೂ.1 ಎಂದು ವಿಚಾರಣೆಗೆ ಒಳಪಡಿಸಿದ್ದು, ದಾವಾಂಶಗಳನ್ನು ರುಜುವಾತುಪಡಿಸಲು ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ತಮ್ಮ ಸಾಕ್ಷ್ಯದಲ್ಲಿ ದಾವಾಂಶಗಳನ್ನು ಪುನರುಚ್ಚರಿಸಿ ತಮ್ಮ ಸಾಕ್ಷ್ಯ ವಿಚಾರಣೆಯ ಸಮರ್ಥನೆಗಾಗಿ, **ನಿ.ಪಿ-1** ದಿನಾಂಕಃ17.02.2018 ರಂದು ಪ್ರತಿವಾದಿಯರ ಸಂಘದಿಂದ ಪಾಸು ಮಾಡಿರುವ ರೆಸೆಲ್ಯೂಷನ್ ಅರ್ಜಿಯಾಗಿರುತ್ತದೆ. **ನಿ.ಪಿ-2** ಪ್ರತಿವಾದಿಗಳ ಸಂಘದಿಂದ ವಾದಿ ಬ್ಯಾಂಕಿಗೆ ಮಾಡಿಕೊಟ್ಟಿರುವ ಪ್ರಮಾಣ ಪತ್ರವಾಗಿರುತ್ತದೆ. **ನಿ.ಪಿ-3** ದಿನಾಂಕ 17.02.2018 ರ ಸಾಲದ ಅರ್ಜಿಯಾಗಿರುತ್ತದೆ. **ನಿ.ಪಿ-4** ಸಾಲ ಮಂಜೂರಾತಿ ಪತ್ರವಾಗಿರುತ್ತದೆ. **ನಿ.ಪಿ-5** ಕರಾರು ಪತ್ರದ ನಿಬಂಧನೆಯಾಗಿರುತ್ತದೆ. **ನಿ.ಪಿ-6** ಕರಾರು ಪತ್ರವಾಗಿರುತ್ತದೆ. **ನಿ.ಪಿ-7** ಲಿಂಕ್ ಲೆಟರ್ ಆಗಿರುತ್ತದೆ. **ನಿ.ಪಿ-8** ಲೆಟರ್ ಆಫ್ ರಿನಿವಲ್ ಪತ್ರವಾಗಿರುತ್ತದೆ. **ನಿ.ಪಿ. 9ರಮತ್ತು 10** ಲೆಟರ್ ಆಫ್ ರಿವೈವಲ್ ಪತ್ರಗಳಾಗಿರುತ್ತವೆ. **ನಿ.ಪಿ-11** ಬ್ಯಾಂಕ್ ಸ್ಟೇಟ್ ಮೆಂಟ್ ಆಗಿರುತ್ತದೆ.

10. ಈ ಮೇಲ್ಕಂಡ ದಾಖಲಾತಿಗಳನ್ನು ಪರಿಶೀಲಿಸಿದಾಗ, ಪ್ರತಿವಾದಿಯರು ವಾದಿ ಬ್ಯಾಂಕಿನಿಂದ ದಿನಾಂಕ:23.02.2018 ರೂ.70,000/- ಸಾಲವಾಗಿ ಪಡೆದುಕೊಂಡಿದ್ದು, ಸದರಿ ಸಾಲವನ್ನು ವಾರ್ಷಿಕ ಶೇ.11.65% ರೂಪಾಯಿಗಳ ಬಡ್ಡಿ ದರದೊಂದಿಗೆ 3 ವರ್ಷದ ಮಿತಿಯಲ್ಲಿ 12 ಮಾಸಿಕ ಕಂತುಗಳ ಮೂಲಕ ಪಾವತಿಸಲು ನಿ.ಪಿ-6 ರಲ್ಲಿ ಒಪ್ಪಿಕೊಂಡು ಸಾಲ ಪಡೆದಿರುವುದು ಕಂಡುಬಂದಿರುತ್ತದೆ. ಇದರ ಪ್ರಕಾರ ಸಾಲ ಮರುಪಾವತಿಸಲು ಇದರಲ್ಲಿರುವ ಷರತ್ತುಗಳಿಗೆ ಒಳಪಟ್ಟು ಸಾಲವನ್ನು ಮರುಪಾವತಿಸುವುದಾಗಿ ಪ್ರತಿವಾದಿಯರು ಕರಾರು ಬರೆದು ಕೊಟ್ಟಿರುತ್ತಾರೆಂದು ಕಂಡುಬಂದಿರುತ್ತದೆ. ಅಂತೆಯೇ ಸದರಿ ಸಾಲದ ಭದ್ರತೆಗಾಗಿ ನಿ.ಪಿ-11 ಸಾಲದ ಖಾತೆಯ ನಕಲು ಆಗಿದ್ದು, ಅದನ್ನು ಪರಿಶೀಲಿಸಿದಾಗ, ರೂ.97,443.27/- ಸಾಲ ಬಾಕಿ ಇರುವುದು ಕಂಡುಬರುತ್ತದೆ.

11. ಸದರಿ ಅಂಶಗಳನ್ನು ಪರಿಗಣಿಸಿದಾಗ, ಸದರಿ ಪಿ.ಡಬ್ಲ್ಯೂ -1 ರವರ ಸಾಕ್ಷ್ಯವನ್ನು ಮತ್ತು ನಿ.ಪಿ-1 ರಿಂದ ನಿ.ಪಿ-11 ರಲ್ಲಿರುವ ಅಂಶಗಳನ್ನು ಸದರಿ ಪ್ರತಿವಾದಿಯರು ಯಾವುದೇ ರೀತಿಯಿಂದ ಪ್ರಶ್ನಿಸದೇ ಇರುವುದರಿಂದ ದಾವಾಂಶಗಳನ್ನು ಪ್ರತಿವಾದಿಯರ ವಿರುದ್ಧ ಪರಿಗಣಿಸಬೇಕಾಗಿರುತ್ತದೆ ಅಲ್ಲದೇ

ಪಿ.ಡಬ್ಲ್ಯೂ -1 ರವರ ಸಾಕ್ಷ್ಯವನ್ನು ಹಾಗೂ ನಿ.ಪಿ-1 ರಿಂದ 11 ರಲ್ಲಿರುವ ಅಂಶಗಳನ್ನು ತಿರಸ್ಕರಿಸುವುದು ಸಾಧ್ಯವಿರುವುದಿಲ್ಲ. ಅಲ್ಲದೇ ಸದರಿ ನಿ.ಪಿ-11 ನ್ನು ಪರಿಶೀಲಿಸಿದಾಗ, ದಿನಾಂಕ:30.09.2024ಕ್ಕೆ ರೂ.97,443.27/-ಗಳು ಬಾಕಿ ಇರುತ್ತದೆ ಎಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ. ಸದರಿ ಅಂಶಗಳನ್ನು ಪರಿಗಣಿಸಿದಾಗ, ನಿ.ಪಿ-11 ರಲ್ಲಿರುವ ಅಂಶಗಳನ್ನು ತಿರಸ್ಕರಿಸಲು ಯಾವುದೇ ಸಮರ್ಥನೀಯ ಕಾರಣ ಇಲ್ಲದೇ ಇರುವುದರಿಂದ ದಾವೆ ಸಲ್ಲಿಸಿದ ದಿನಾಂಕದಂದು ಸದರಿ ಪ್ರತಿವಾದಿಯರು ಬಡ್ಡಿ ಸೇರಿ ಒಟ್ಟು ರೂ.1,04,399/- ಗಳಿಗೆ ಬಾಕಿ ದಾರರಾಗಿರುತ್ತಾರೆಂದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ.

12. ಅಲ್ಲದೇ ಸದರಿ ಪ್ರತಿವಾದಿಯರು ದಿನಾಂಕ:23.02.2018 ರೂ.70,000/- ನ್ನು ಬೆಳೆ ಸಾಲವಾಗಿ ಪಡೆದುಕೊಂಡಿರುತ್ತಾರೆ. ಸದರಿ ವಾದಪತ್ರದ ಅಂಶಗಳನ್ನು ಅಲ್ಲಗಳೆಯಲು ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಯರಾಗಿರುತ್ತಾರೆ. ಅಂತೆಯೇ ಸದರಿ ದಾವೆಯನ್ನು ದಿನಾಂಕ:27.06.2025 ರಂದು ಸಲ್ಲಿಸಿದ್ದು, ನಿಗದಿತ ಕಾಲಾವಧಿಯಲ್ಲಿ ಸಲ್ಲಿಸಲಾಗಿರುತ್ತದೆ ಎಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ.

ಅಲ್ಲದೇ ದಾವಾ ಸಲ್ಲಿಸಿ ದಾವಾ ಸಮನ್ಸ್ ಜಾರಿಯಾದ ನಂತರ ಪ್ರತಿವಾದಿಯರು ನ್ಯಾಯಾಲಯಕ್ಕೆ ಹಾಜರಾಗದೇ ಏಕತರ್ಫಿಗಳಾಗಿರುತ್ತಾರೆ. ಸದರಿ ಪಿ.ಡಬ್ಲ್ಯೂ -1 ರವರನ್ನು ಪಾಟೀ ಸವಾಲು ಮಾಡದೇ ಹಾಗೂ ನಿ.ಪಿ-1 ರಿಂದ 11 ರಲ್ಲಿನ ಅಂಶಗಳನ್ನು ಪ್ರಶ್ನಿಸದೇ ಇರುವುದರಿಂದ ಸದರಿ ಪ್ರತಿವಾದಿಯರು ದಾವಾಂಶಗಳನ್ನು ಮತ್ತು ನಿ.ಪಿ-1 ರಿಂದ 11ರ ಅಂಶಗಳನ್ನು ಸಂಪೂರ್ಣವಾಗಿ ಒಪ್ಪಿಕೊಂಡಿರುತ್ತಾರೆಂಬುದು ಹಾಗೂ ನಿಗದಿತ ಸಮಯದಲ್ಲಿ ಸಾಲವನ್ನು ಪಾವತಿಸಲು ವಿಫಲರಾಗಿದ್ದಾರೆಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಆ ಪ್ರಕಾರವಾಗಿ ಸದರಿ ಪ್ರತಿವಾದಿಯರು ದಾವೆ ಸಲ್ಲಿಸಿದ ದಿನಾಂಕದಂದು ಬಾಕಿ ಇರುವಂತಹ ರೂ.1,04,399/- ರೂಪಾಯಿಗಳನ್ನು ವಾದಿ ಬ್ಯಾಂಕಿಗೆ ಮರುಪಾವತಿಸಲು ಬಾಧ್ಯಸ್ಥರಿರುತ್ತಾರೆ ಎಂಬುದು ನ್ಯಾಯಾಲಯದ ಗಮನಕ್ಕೆ ಕಂಡುಬಂದಿರುತ್ತದೆ.

13. ಅಲ್ಲದೇ ವಾದಿಯು ದಾವೆ ಸಲ್ಲಿಸಿದ ದಿನಾಂಕದಿಂದ ಸದರಿ ಹಣವನ್ನು ಸಂಪೂರ್ಣವಾಗಿ ಪ್ರಸ್ತುತ ಹಾಗೂ ಭವಿಷ್ಯದ ಬಡ್ಡಿದರ ಶೇ.11.65% ರ ಬಡ್ಡಿಯೊಂದಿಗೆ ಪ್ರತಿವಾದಿಗಳು ಮರುಪಾವತಿಸುವಂತೆ ಆದೇಶಿಸಬೇಕೆಂದು ಕೋರಿರುತ್ತಾರೆ. ಸದರಿ ದಾವಾ ದಿನಾಂಕದಿಂದ ಸದರಿ ಹಣವನ್ನು ಸಂಪೂರ್ಣವಾಗಿ

ಮರುಪಾವತಿಸುವರೆಗೆ ವಾರ್ಷಿಕವಾಗಿ ಶೇ.6% ರ ಭವಿಷ್ಯದ ಬಡ್ಡಿಯೊಂದಿಗೆ ಪ್ರತಿವಾದಿಯರು ಮರುಪಾವತಿಸಲು ಬಾಧ್ಯಸ್ಥರಿರುತ್ತಾರೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ಆದ್ದರಿಂದ ಸದರಿ ಅಂಶವನ್ನು ಪರಿಗಣಿಸಿ, 1ನೇ ಅಂಶವನ್ನು ವಾದಿ ಬ್ಯಾಂಕಿನ ಪರವಾಗಿ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

14. ಅಂಶ-2. ಈ ಮೇಲ್ಕಂಡ 1ನೇ ಅಂಶದಲ್ಲಿ ತಿಳಿಸಿರುವ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

:: **ಆದೇಶ** ::

ವಾದಿ ಬ್ಯಾಂಕ್ ಸಲ್ಲಿಸಿರುವ ದಾವೆಯನ್ನು ಖರ್ಚು ಸಹಿತ ಡಿಕ್ರಿ ಮಾಡಲಾಗಿರುತ್ತದೆ.

ಪ್ರತಿವಾದಿಯರು ಒಟ್ಟು ರೂ.1,04,399/- ಗಳನ್ನು ವಾದಿ ಬ್ಯಾಂಕಿಗೆ ಮರುಪಾವತಿಸಲು ಬಾಧ್ಯಸ್ಥರಾಗಿರುತ್ತಾರೆಂದು ಘೋಷಿಸಲಾಗಿದೆ.

ಪ್ರತಿವಾದಿಗಳು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸದರಿ ದಾವೆ ಸಲ್ಲಿಸಿದ ದಿನಾಂಕದಿಂದ ಬಾಕಿ ಇರುವ ಒಟ್ಟು ಸಾಲದ ಹಣ ರೂ.1,04,399 /- ಗಳಿಗೆ ವಾರ್ಷಿಕವಾಗಿ ಶೇ.6 ಪ್ರಸ್ತುತ

ಮತ್ತು ಭವಿಷ್ಯದ ಬಡ್ಡಿಯನ್ನು ವಾದಿ ಬ್ಯಾಂಕಿಗೆ ನೀಡಲು ಸದರಿ ಪ್ರತಿವಾದಿಯರು ಬಾಧ್ಯಸ್ಥರಾಗಿರುತ್ತಾರೆ.

ಈ ಪ್ರಕಾರ ಡಿಕ್ರಿ ಬರೆಯುವಂತೆ ಆದೇಶಿಸಲಾಗಿದೆ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೂಲಕ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಓದಿ, ತಪ್ಪುಗಳನ್ನು ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ **ದಿನಾಂಕಃ 16ನೇ ಜುಲೈ 2026** ರಂದು ಉದ್ಘೋಷಿಸಲಾಯಿತು.)

SAVITHARANI H V

Digitally signed by SAVITHARANI H V
Date: 2026.07.17 14:42:08 +0530

(ಶ್ರೀಮತಿ ಸವಿತರಾಣಿ ಹೆಚ್.ವಿ.)
ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ, ಗುಬ್ಬಿ.

:: <u>ಅನುಬಂಧ</u> ::

<u>1. ವಾದಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ</u>

ಪಿ.ಡಬ್ಲ್ಯೂ -1 : ಶ್ರೀ ಸತ್ಯಜಿತ್ ಶ್ರೀವಾಸ್ತವ.

<u>2. ವಾದಿಯ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-</u>

ನಿ.ಪಿ.1	:	ರೆಸ್ಯೂಲೇಶನ್ ಪತ್ರ.
ನಿ.ಪಿ.2	:	ಪ್ರಮಾಣ ಪತ್ರ.
ನಿ.ಪಿ.3	:	ಸಾಲದ ಅರ್ಜಿ.
ನಿ.ಪಿ.4	:	ಸಾಲ ಮಂಜೂರಾತಿ ಪತ್ರ.
ನಿ.ಪಿ.5	:	ನಿಬಂಧನೆ ಕರಾರು ಪತ್ರ.
ನಿ.ಪಿ.6	:	ಕರಾರು ಕರಾರು ಪತ್ರ.
ನಿ.ಪಿ.7	:	ಲಿಂಕ್ ಲೆಟರ್.
ನಿ.ಪಿ.8	:	ಲೆಟರ್ ಆಫ್ ರಿನಿವಲ್.

ನಿ.ಪಿ.9 ಮತ್ತು 10: ಲೆಟರ್ ಆಫ್ ರಿವೈವಲ್.

ನಿ.ಪಿ.11 : ಬ್ಯಾಂಕ್ ಸ್ಟೇಟ್ ಮೆಂಟ್.

3. ಪ್ರತಿವಾದಿಯರ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳ ಪಟ್ಟಿಃ-

: ಇಲ್ಲ:

4. ಪ್ರತಿವಾದಿಯರ ಪರ ಗುರುತು ಮಾಡಲ್ಪಟ್ಟ ನಿಶಾನೆಗಳುಃ-

: ಇಲ್ಲ:

SAVITHARANI H V

Digitally signed by SAVITHARANI H V
Date: 2026.07.17 14:42:16 +0530

(ಶ್ರೀಮತಿ ಸವಿತರಾಣಿ ಹೆಚ್.ವಿ.)
ಅದಿಕ ಸಿವಿಲ್ ನ್ಯಾಯಾದೀಶರು
ಮತ್ತು ಪ್ರ.ದ.ನ್ಯಾ.ದಂ, ಗುಬ್ಬಿ.